# ಕಚಗುಳಿ ಇಡುವ ಚೌಕುಳಿ ಉಡುಗೆ



**ಸೀಕ್ವೆನ್ಸ್ ಅಥವಾ ಚೌಕುಳಿ ಉಡುಗೆಗಳು ಫ್ಯಾಷನ್ ಟ್ರೆಂಡ್ ಸೃಷ್ಟಿಸಿವೆ. ಪ್ಲೆಸೆಂಟ್ ಲುಕ್ ಕೊಡುವ ಚಚ್ಚೌಕ ವಿನ್ಯಾಸದ ಉಡುಪು ಸದ್ಯ ಬಹು ಬೇಡಿಕೆಯ ಉಡುಗೆಯಾಗಿದೆ.**

**ಆಶಾ ಎಸ್. ಕುಲಕರ್ಣಿ**

ಮಹಿಳೆಯರ ಫ್ಯಾಷನ್ ಲೋಕಕ್ಕೆ ಈಗ ಹೊಸದಾಗಿ ಎಂಟ್ರಿ ಕೊಟ್ಟಿರುವುದು ಚೆಕ್ಸ್ ಉಡುಪುಗಳು. ಕಾಲ ಬದಲಾದಂತೆ ಯುವ ಪೀಳಿಗೆಯ ಅಭಿರುಚಿಗಳೂ ಬದಲಾಗುತ್ತಿವೆ. ಈಗ ಏನಿದ್ದರೂ ಸೀಕ್ವೆನ್ಸ್ ಬಟ್ಟೆಗಳದ್ದೇ ಕಾರುಬಾರು. ಹೊಸ ಉಡುಪುಗಳನ್ನು ಬಯಸುವವರು ತಮ್ಮ ಲುಕ್ ಅನ್ನು ಸ್ಟೈಲಿಷ್‌ಗೆ ಬದಲಾಯಿಸಿಕೊಳ್ಳಬಯಸುವವರಿಗೆ ಚೌಕುಳಿ ಉಡುಗೆ ಅತ್ಯಂತ ಸೂಕ್ತವಾಗಿದೆ.

ಮೊದಲೆಲ್ಲಾ ಈ ಚೆಕ್ಸ್ ಬಟ್ಟೆಗಳು ಬರೀ ಪುರುಷರ ಉಡುಪುಗಳಿಗೆ ಮಾತ್ರ ಸೀಮಿತವಾಗಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಚೆಕ್ಸ್ ಡ್ರೆಸ್ ಮಹಿಳೆಯರ ವಾರ್ಡ್‌ರೋಬ್ ಕೂಡ ಅಲಂಕರಿಸಿಕೊಳ್ಳುತ್ತಿವೆ. ಮಹಿಳೆಯರು ಪುರುಷರು, ಮಕ್ಕಳು, ವೃದ್ಧರು ಎಂಬ ಭೇದಭಾವವಿಲ್ಲದೆ ಎಲ್ಲರಿಗೂ ಕ್ಲಾಸಿಕ್ ಲುಕ್ ನೀಡುವ ಈ ಚೌಕುಳಿ ಉಡುಪುಗಳಿಗೆ ಈಗ ಎಲ್ಲಿಲ್ಲದ ಬೇಡಿಕೆ.

ಹಿಂದೆಯೂ ಈ ಉಡುಗೆ ಚಾಲ್ತಿಯಲ್ಲಿತ್ತು. ಆಗ 'ಬೆಡ್‌ಶೀಟ್ ಅನ್ನು ಶರ್ಟ್ ಹೊಲಿಸಿದೆಯಾ ಎಂದೋ, ಏನು ಬೆಡ್‌ಶೀಟ್ ಅನ್ನು ಸಲ್ವಾರ್ ಆಗಿ ಮಾರ್ಪಾಡು ಮಾಡಿಕೊಂಡೆಯಾ' ಎಂದೆಲ್ಲ ತಮಾಷೆ